1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.92/2020

ದಿಃ 25.02.2022

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-9 Pw-11

| | | |
|---|---|---|
| ಹೆಸರು | ಃ | ಅಶೋಕ್ |
| ತಂದೆಯ ಹೆಸರು | ಃ | ಜವರಾಬೋವಿ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಆಟೋ ಚಾಲಕ |
| ವಾಸಸ್ಥಳ | ಃ | ಸುಣ್ಣಘಟ್ಟ,<br>ಚನ್ನಪಟ್ಟಣ ಟೌನ್ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ.1ರಿಂದ 8ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಿರುವ ಆರೋಪಿ ಗೊತ್ತು. ಚಾಸಾ.1 ಮತ್ತು 2ರವರು ಯಾವ ಜನಾಂಗದವರು ಎಂದು ಗೊತ್ತಿಲ್ಲ. ನಾನು ಎಸ್ ಸಿ ಜನಾಂಗದವರು. ಚಾಸಾ.3, 5 ಮತ್ತು 6 ರವರು ಎಸ್ ಸಿ ಜನಾಂಗದವರು. ಆರೋಪಿಗಳು ಯಾವ ಜನಾಂಗದವರು ಎಂದು ಗೊತ್ತಿಲ್ಲ.

2. ದಿಃ25.02.2020ರಂದು ಚಾಸಾ.1ರವರ ಜಮೀನಿನಲ್ಲಿ ಹದ್ದುಬಸ್ತಿಗಾಗಿ ಕಲ್ಲು ನೆಡಲು ನಾನು, ನನ್ನ ಪತ್ನಿ ಚಾಸಾ.5 ಹೋಗಿದ್ದು ನಾವು ಕಲ್ಲು ನೆಟ್ಟು ಸಂಜೆ 7.00 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ 3 ಜನ ಆರೋಪಿಗಳು ಮತ್ತು ಇತರೆ ಸುಮಾರು 15 ಜನ ಬಂದು

ಇಲ್ಲಿ ಏನು ಮಾಡುತ್ತಿದ್ದೀರಾ, ಕುಡಿಯುತ್ತಿದ್ದೀರಾ, ಗಲಾಟೆ ಮಾಡುತ್ತಿದ್ದೀರಾ ಎಂದು ಕೇಳಿದ್ದು, ಯಾರದ್ದು ಜಮೀನು ಎಂದು ಗಲಾಟೆ ಮಾಡಿದ್ದು, ನಾನು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಇಲ್ಲಿ ಚರ್ಚ್ ಕಟ್ಟುತ್ತೀರಾ ಎಂದೆಲ್ಲಾ ಕೇಳಿದರು. ಇಲ್ಲಿ ಏನು ಮಾಡಬಾರದು ಎಂದು ಚಾಸಾ.1 ರವರ ಮೇಲೆ ಹಲ್ಲೆಗೆ ಯತ್ನಿಸಿದಾಗ ಚಾಸಾ.4 ರವರು ಅಡ್ಡಬಂದಾಗ ಅವರಿಗೆ ಕುತ್ತಿಗೆಯ ಮೇಲೆ 1 ನೇ ಆರೋಪಿ ಹೊಡೆದರು. ಆಗ ಚಾಸಾ.2 ಮತ್ತು 3 ರವರು ಅಡ್ಡಬಂದಿದ್ದು ಅವರನ್ನು ತಳ್ಳಿರುತ್ತಾರೆ. ಆರೋಪಿಗಳು ಕಲ್ಲನ್ನು ಒಡೆದುಹಾಕುತ್ತೇವೆಂದು ಹೇಳಿದರು. ನಂತರ ನಾವು ಮನೆಗೆ ಹಿಂದಿರುಗಿರುತ್ತೇವೆ. ನಂತರ ಮಾರನೇ ದಿನ ಕಲ್ಲುಗಳನ್ನು ಒಡೆದು ಹಾಕಿರುತ್ತಾರೆಂದು ತಿಳಿಯಿತು. ಆ ವಿಷಯವನ್ನು ಚಾಸಾ.1 ರವರಿಗೆ ತಿಳಿಸಿದ್ದು ಅವರು ಬೆಂಗಳೂರಿಂದ ಬಂದು 27 ನೇ ತಾರೀಖಿನಂದು ದೂರು ನೀಡಿರುತ್ತಾರೆ.

3. ದಿಃ27.02.2020 ರಂದೇ ಸಂಜೆ 4.30 ರಿಂದ 5.30 ಗಂಟೆ ಸಮಯದಲ್ಲಿ ಪೊಲೀಸರು ಚಾಸಾ.1 ರವರ ಜಮೀನಿಗೆ ಮಹಜರ್ ಮಾಡಲು ಬಂದಿದ್ದರು. ಆ ಸಮಯದಲ್ಲಿ ನಾನು ಇದ್ದು ಭಾವಚಿತ್ರ ತೆಗೆದು ಸಹಿ ಪಡೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನಿ.ಪಿ.2 ಮಹಜರ್‌ನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಕಡತದಲ್ಲಿನ ನಿ.ಪಿ.5 ಮತ್ತು 6 2 ಭಾವಚಿತ್ರಗಳನ್ನು ತೋರಿಸಿದ್ದು, ಅದರಲ್ಲಿ ತಾನು ಇರುವುದಾಗಿ ನುಡಿಯುತ್ತಾರೆ.

4. ಆರೋಪಿಗಳು ಘಟನೆಯ ಸಮಯದಲ್ಲಿ ಬಂದರೆ ಕೊಲೆ ಮಾಡುತ್ತೇವೆಂದು ಬೆದರಿಕೆ ಸಹ ಹಾಕಿದ್ದರು. ಬಾರ್ ಕಟ್ಟಿ, ಚರ್ಚ್ ಕಟ್ಟಬೇಡಿ ಎಂದು ಹೇಳಿದರು. ನನ್ನ ಜೊತೆ ಮಕ್ಕಳಿದ್ದ ಕಾರಣ ನಾನು ಘಟನೆಯ ಸ್ಥಳದಿಂದ ಪಕ್ಕಕ್ಕೆ ಬಂದೆ. ಆರೋಪಿಗಳು ನೀವು ಎಸ್ ಸಿ ಯವರು, ಕೀಳು ಜಾತಿಯವರು, ದಲಿತರು ಎಂದು ಬೈಯ್ಯುತ್ತಿದ್ದರು.

<u>ಪಾಟೀ ಸವಾಲುಃ ಶ್ರೀ. ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಾವು ಬೆಸ್ತ ಜನಾಂಗದವರು. ನಾವು ಎಸ್ ಸಿ, ಎಸ್ ಟಿ ಜನಾಂಗದವರು ಅಲ್ಲ ಎಂದರೆ ಸರಿ. ನಾನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿಲ್ಲ.

2. ನಿ.ಪಿ.2ರಲ್ಲಿ ನನ್ನ ಹೆಸರು ಮತ್ತು ವಿವರಣೆ ಬರೆದಿದ್ದನ್ನು ನೋಡಿ ನಾನು ಸಹಿ ಮಾಡಿರುತ್ತೇನೆ ಎನ್ನುವುದು ಸರಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿ.ಪಿ.2ರಲ್ಲಿ ನನ್ನದು ಕ್ರಿಶ್ಚಿಯನ್ ಜನಾಂಗ ಎಂದು ಬರೆದಿದೆ ಎನ್ನುವುದು ಸರಿ.

3. ನಾವು ಏಸು ದೇವರನ್ನು 5-6 ವರ್ಷದಿಂದ ಆರಾಧನೆ ಮಾಡುತ್ತೇವೆ. ನಾನು ಚಾಸಾ.1ರವರ ಚರ್ಚ್ ಗೆ ಹೋಗಿ ಪ್ರಾರ್ಥನೆ ಮಾಡುತ್ತೇನೆ. ಘಟನೆಗೆ ಮುನ್ನ ನನಗೆ ಮತ್ತು ಆರೋಪಿಗಳಿಗೆ

ವೈಯ್ಯಕ್ತಿಕ ಪರಿಚಯ ಇಲ್ಲ ಎಂದರೆ ಸರಿ. ಘಟನಾ ಸಮಯದಲ್ಲಿ ಸೇರಿದ್ದ ಸುಮಾರು 15 ಜನರ ಹೆಸರು ಗೊತ್ತಿಲ್ಲ.

4. ಚಾಸಾ.1 ರವರು ಜಮೀನನ್ನು ಚರ್ಚ್ ಕಟ್ಟಲು ಖರೀದಿಸಿದ್ದರು ಎನ್ನುವುದು ಸರಿಯಲ್ಲ. ಚಾಸಾ.1 ರವರ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ.

5. ಚಾಸಾ.1 ಮತ್ತು 2 ರವರು ಹಾಗೂ ಇತರರು ವಾರಕ್ಕೊಮ್ಮೆ ಮತ್ತು ಆಗಾಗ ಸದರಿ ಜಮೀನಲ್ಲಿ ಸೇರಿ ಮದ್ಯಪಾನ ಮಾಡುವುದು, ಕುಣಿಯುವುದು ಮತ್ತು ಗಲಾಟೆ ಮಾಡುವುದು ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಆ ವಿಷಯವಾಗಿ ಗ್ರಾಮಸ್ಥರು ಗ್ರಾಮ ಪಂಚಾಯ್ತಿ ಅಧ್ಯಕ್ಷ 1 ನೇ ಆರೋಪಿಗೆ ಮತ್ತು ಇತರೆ ಊರಿನ ಮುಖಂಡರಿಗೆ ಅವರ ವಿರುದ್ಧ ದೂರು ನೀಡಿದ್ದರು ಎನ್ನುವುದು ಸರಿಯಲ್ಲ. ಆ ವಿಷಯವಾಗಿ ಚಾಸಾ.1 ಮತ್ತು 2 ರವರಿಗೆ ಆರೋಪಿಗಳು ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ.

6. ಘಟನೆಯ ನಂತರ ನಾವು ಚನ್ನಪಟ್ಟಣದ ನಮ್ಮ ಮನೆಗೆ ಹಿಂದಿರುಗಿದೆವು. ಅದೇ ದಿನ ಚನ್ನಪಟ್ಟಣದ ಯಾವುದೇ ಠಾಣೆಗೆ ಹೋಗಿ ಘಟನೆಯ ಬಗ್ಗೆ ತಿಳಿಸಲು ಯತ್ನಿಸಲಿಲ್ಲ. ಮಾರನೇ ದಿನವೂ ಘಟನೆಯ ಬಗ್ಗೆ ತಿಳಿಸಲು ಯತ್ನಿಸಲಿಲ್ಲ ಎಂದರೆ ಸರಿ.

7. 1 ನೇ ಆರೋಪಿ ಮತ್ತು ಇತರರು ನಾವು ಚಾಸಾ.1 ರವರ ಜಮೀನಲ್ಲಿ ಕಲ್ಲು ಹಾಕಿ ಬರುತ್ತಿದ್ದ ಸಮಯದಲ್ಲಿ ಸಂಜೆ ಅವಾಚ್ಯ

ಶಬ್ದದಿಂದ ನಿಂದಿಸಿ, ಜಾತಿ ಹಿಡಿದು ಬೈದು ನಮ್ಮ ಮೇಲೆ ಹಲ್ಲೆ ಮಾಡಿದರು ಎಂದು ಚಾಸಾ.1 ಮತ್ತು 2ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. ನಾನು ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನು ಘಟನೆಯ ಸಮಯದಲ್ಲಿ ಇದ್ದ ಬಗ್ಗೆ ಹೇಳಿದ್ದು, ಅದನ್ನು ಬರೆದುಕೊಂಡಿದ್ದು ನನ್ನ ಸಹಿ ಪಡೆದಿರುತ್ತಾರೆ. ನನ್ನ ಹೇಳಿಕೆಯನ್ನು ಇನ್ಸ್ ಪೆಕ್ಟರ್ ಪ್ರಭಾಕರ್‌ರವರು ಬರೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಅವರೇ ಮಾಡಿರುತ್ತಾರೆ.

9. ನಿ.ಪಿ.3ರಿಂದ 6ಗಳನ್ನು ಪೊಲೀಸರು ಪಂಚನಾಮೆಯ ಸಮಯದಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಿ.ಪಿ.3ನ್ನು ಪಂಚನಾಮೆಗೆ ಮ್ನುನವೇ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅದನ್ನು 25ನೇ ತಾರೀಖಿನಂದು ಮಧ್ಯಾಹ್ನ ಚಾಸಾ.1ರವರು ತೆಗೆದಿರುತ್ತಾರೆ. ಆ ಭಾವಚಿತ್ರದಲ್ಲಿ ನಾನು ಇಲ್ಲ ಎನ್ನುವುದು ಸರಿ. ಸಾಕ್ಷಿಯ ಉದ್ದೇಶಕ್ಕಾಗಿ ನಾವೇ ಕಲ್ಲುಗಳನ್ನು ಮುರಿದು ಭಾವಚಿತ್ರಗಳನ್ನು ತೆಗೆದು ನೀಡಿರುತ್ತೇವೆ ಎನ್ನುವುದು ಸರಿಯಲ್ಲ.

10. ನನಗೆ ಯಾವುದೇ ವಿಷಯ ತಿಳಿಯದಿದ್ದರೂ ಚಾಸಾ.1 ಮತ್ತು 2ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿ.ಪಿ.2ಕ್ಕೆ ಅಕ್ಕೂರು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ

ಎನ್ನುವುದು ಸರಿಯಲ್ಲ. ನಿ.ಪಿ.2ಕ್ಕೆ ನನ್ನನ್ನು ಸ್ಥಳಕ್ಕೆ ಕರೆದಿದ್ದು ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.